ನಯಾಜ್‌ನನ್ನು ಅವಳು ಆರ್ತಳಾಗಿ ಕೂಗಿ ಕರೆದಳು 'ನಯಾಜ್... ನಯಾಜ್.' ಬೆಳಗಿನಿಂದ ಸೂಟ್ ತೊಟ್ಟಿದ್ದ ಅವನು ಆಗ ತಾನೇ ಕೋಟ್ ಬಿಚ್ಚಿಟ್ಟು, ಷರ್ಟ್‌ನ ತೋಳುಗಳನ್ನು ಮಡಿಸಿ, ಆಕರ್ಷಕವಾಗಿ ಕಾಣುತ್ತಿದ್ದ.

ಸಾದಿಕಾಳನ್ನು ಸಂಪರ್ಕಿಸಲು ವಿಫಲ ಪ್ರಯತ್ನ ಪಡುತ್ತಿದ್ದ ರೆಹಮತ್, ಮಗನ ಕೈಗೆ ಮೊಬೈಲ್ನಿತ್ತು,

'ತುಂಬಾ ಅರ್ಜೆಂಟ್ ನಯಾಜ್, ಸಾದಿಕಾಗೆ ಒಂದಿಷ್ಟು ಕನೆಕ್ಟ್ ಮಾಡಿಕೊಡಪ್ಪ' ಎಂದಳು.

ಅಲ್ಲೊಬ್ಬಳು ಘಾಗ್ರಚೋಲಿ ತೊಟ್ಟಿದ್ದ ಚೆಲುವೆಯು ಇವನತ್ತಲೇ ಕುಡಿನೋಟವನ್ನು ಹಾಯಿಸುತ್ತಿದ್ದಳು. ಆ ಮಾದಕತೆಯಲ್ಲಿ ತೇಲಿ ಅವಳ ಸಮೀಪ ಇವನು ಸುಳಿಯಬೇಕಿತ್ತು. ರೆಹಮತ್ ಮಗನನ್ನು ತಡೆದು ಮೊಬೈಲನ್ನು ಅವನ ಕೈಗಿತ್ತಿದ್ದರಿಂದ ಅವನಿಗೆ ಒಂದಿಷ್ಟು 'ಕಬಾಬ್ ಮೇ ಹಡ್ಡಿ' ಎಂದೆನಿಸಿತು. ಹಾಗಾಗಿ ಅಸಹನೆಯನ್ನು ಹೊರ ಚೆಲ್ಲಿದ.

'ಇದೇನು ಅಮ್ಮಿ ನಿಮ್ಮದು ಯಾವಾಗಲು ಇದೇ ಗೋಳು. ಎಷ್ಟು ಸಾರೆ ತೋರಿಸಿಕೊಟ್ಟಿದ್ದೇನೆ ನಿಮಗೆ ಈ ಮೊಬೈಲ್‌ನ ಕಿವಿ ಹಿಂಡೋದು; ಒಂದು ಎಸ್ಸೆಮ್ಮೆಸ್ ಕಳಿಸೋಕೆ ಬರುವುದಿಲ್ಲ. ಒಂದು ಕಾಲ್ ರಿಸಿವ್ ಮಾಡೋಕೆ ಬರೋದಿಲ್ಲ' ಗೊಣಗುಟ್ಟುತ್ತಲೇ ಅವನು ಸಾದಿಕಾಳ ನಂಬರನ್ನು ತಲುಪುವಷ್ಟರಲ್ಲಿ ಅದೇ ಮತ್ತೆ ರಿಂಗಾಯಿತು

ಅವನು ಕಿವಿಗಾನಿಸಿದ ಮತ್ತು ಒಮ್ಮೆಲೇ ಚಕಿತನಾಗಿ ತಾಯಿಯ ಕಡೆಗೊಮ್ಮೆ ದೃಷ್ಟಿಹಾಯಿಸಿ, 'ಆಮೇಲೆ ಹೇಳಿದರೆ ಆಗೋದಿಲ್ಲವಾ? ಈಗ ಅವರು ಊಟ ಮಾಡುತ್ತಿದ್ದಾರೆ, ಆಮೇಲೆ ಫೋನ್ ಮಾಡಿ' ಎಂದು ಮುನ್ನೆಚ್ಚರಿಕೆಯಿಂದ ಒಂದು ಸುಳ್ಳನ್ನು ತೇಲಿಸಿದರೂ ಮರೆತು ಫೋನನ್ನು ತಾಯಿಯ ಕೈಗಾನಿಸಿ ಕುಡಿನೋಟದತ್ತ ದಾಪುಗಾಲನ್ನಿಕ್ಕಿದ.

ತಲೆಬುಡ ಏನೂ ಅರ್ಥವಾಗದೆ ಫೋನನ್ನು ಕೈಯಲ್ಲಿ ಹಿಡಿದ ರೆಹಮತ್‌ಗೆ ಮಗನ ಚರ್ಯೆಯಿಂದ ಅತೀವ ಬೇಸರವೆನಿಸಿತು. ಸಾದಿಕಾ ಯಾಕೆ ಫೋನ್ ಮಾಡಿರಬಹುದು? ಫಹದ್‌ನ ಅಣ್ಣ ಮತ್ತೆ ಒಂದೆರಡು ಸಲ ಊಟಕ್ಕೆ ಕರೆದರೂ ಹೋಗದೆ ಅವಳು ಅಲ್ಲೇ ಕುಳಿತು ತನ್ಮಯತೆಯಿಂದ ಫೋನ್ ಮಾಡಿ ಅವಳ ಸಂಪರ್ಕಕ್ಕೆ ಹಾತೊರೆಯತೊಡಗಿದಳು.

ಆಗಲೇ ಅವಳ ಪಕ್ಕದಲ್ಲಿ ಕುಳಿತ ಪುಟ್ಟ ಬಾಲಕಿಯೊಬ್ಬಳು ಅವಳನ್ನು ಎಚ್ಚರಿಸಿದ್ದು,'ಆಂಟಿ ನಿಮ್ಮ ಮೊಬೈಲ್ ರಿಂಗಾಗುತ್ತಿದೆ ನೋಡಿ...' ಅವಳಿಗೆ ತನ್ನ ದಡ್ಡತನದ ಬಗ್ಗೆ ನಗು ಮತ್ತು ಇನ್ನೂ ಐದು ವರ್ಷ ಕೂಡಾ ದಾಟಿರದ ಆ ಮಗುವಿನ ಮೊಬೈಲು ಪರಿಜ್ಞಾನದ ಬಗ್ಗೆ ಮೆಚ್ಚುಗೆ ಮೂಡಿ ತನ್ನ ಹ್ಯಾಂಡ್ ಬ್ಯಾಗಿನ ಪದರಗಳನ್ನು ಜಾಲಾಡಿಸುತ್ತಿರುವಷ್ಟರಲ್ಲಿ ಅದರ ಸದ್ದಡಗಿತು. 'ಸದ್ಯ ಪೀಡೆ ತೊಲಗಿತು' ಎಂದು ಅವಳು ಜಿಪ್ ಎಳೆಯುವಷ್ಟರಲ್ಲಿ ಮತ್ತೆ ಮೊಳಗತೊಡಗಿತು. ಈಗ ಆ ಬಾಲಕಿಯೇ ಅವಳ ಹ್ಯಾಂಡ್ ಬ್ಯಾಗಿನಲ್ಲಿ ಅವಳ ಮೊಬೈಲನ್ನು ಹುಡುಕುವುದರಲ್ಲಿ ಸಹಾಯ ಮಾಡಿ, ಆ ಕರೆಯನ್ನು ಸ್ವೀಕರಿಸಲು ಬಟನ್ ಕೂಡಾ ಒತ್ತಿ ಅವಳ ಕೈಗಿತ್ತಳು. ಜನರ ಅಷ್ಟೊಂದು ಗದ್ದಲದ ನಡುವೆ ಅವಳಿಗೆ ಕೇಳಿಸುವುದಾದರೂ ಹೇಗೆ... ಅವಳು ಅಲ್ಲಿಂದ ಎದ್ದು ಮೂಲೆಯಲ್ಲಿದ್ದ ಕಿಟಕಿಯ ಬಳಿ ಹೋಗಿ ನಿಂತಳು.

'ಹಲೋ... ಯಾರೂ?'

'ಆಪಾ... ನಾನೂ... ಸಾದಿಕಾ.'

'ಯಾರೂ?...'

'ಸಾದಿಕಾ... ಸಾದಿಕಾ... ಆಪಾ ಅನಾಹುತವಾಗಿ ಬಿಟ್ಟಿದೆ...'